ಸಹ 9 ಲಕ್ಷ ರೂಪಾಯಿಗಳನ್ನು ಮೂರು ವರ್ಷಕ್ಕೆ ಒಂದೊಂದು ವರ್ಷಕ್ಕೆ ಮೂರು ಲಕ್ಷ ರೂಪಾಯಿಗಳಂತೆ, ಕೊಟ್ಟು ಇಡೀ ರಾಜ್ಯದಲ್ಲಿ ಈ ಹೊಸ ಯೋಜನೆ ಆಗಬೇಕೆಂದು ಮಾಡಿದ್ದೇವೆ. ಅನೇಕ ಪ್ರೌಢಶಾಲೆಗಳಿಗೆ ಕಟ್ಟಡಗಳು ಇಲ್ಲದೇ ಇರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ ವರ್ಷ ಈ ಪ್ರೌಢಶಾಲೆಗೂ ಹಣ ಕೊಟ್ಟಿದ್ದೇವೆ. ಬರುವ ವರ್ಷ ಸಹ ಹಣ ಜಿಲ್ಲಾ ಪಂಚಾಯತಿ ಮೂಲಕ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ವಿಶೇಷ ಅನುದಾನ ಕೊಟ್ಟು ಈ ವರ್ಷವಾದರೂ ದಯವಿಟ್ಟು ಪ್ರಾರಂಭ ಮಾಡಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಅಧ್ಯಕ್ಷರೇ, ಸರ್ಕಾರದ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಅದರ ಇತಿಮಿತಿಯೊಳಗಡೆ ನಾವು ಕೆಲಸ ಮಾಡಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ 224 ಕ್ಷೇತ್ರಗಳಲ್ಲಿ 9 ಲಕ್ಷರೂಪಾಯಿಗಳನ್ನು ಕೊಟ್ಟು ಶಾಲಾ ಕಟ್ಟಡಗಳನ್ನು ಕಟ್ಟಿ ಅದಕ್ಕೆ ಸುಭಾಷ್ ಚಂದ್ರಬೋಸ್ ಅವರ ಹೆಸರನ್ನು ಇಡಬೇಕೆಂದು ಎಲ್ಲಾ ಶಾಸಕರು ಪ್ರಯತ್ನ ಪಟ್ಟಿದ್ದಾರೆ. ಅವರು ಕೇಳುವುದರಲ್ಲಿ ನ್ಯಾಯ ಇದೆ. ಇದಕ್ಕೆ ಅವಶ್ಯಕತೆ ಇದೆ. ಇಲ್ಲ ಎನ್ನುವ ಪ್ರಶ್ನೆ ಬರುವುದಿಲ್ಲ. ನಮ್ಮ ಇತಿಮಿತಿಯಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಈ ವರ್ಷ ನಾವು ಎಷ್ಟು ಒದಗಿಸುವುದಕ್ಕೆ ಸಾಧ್ಯ ಅದನ್ನು ನೋಡಿ ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಜಯದೇವ ಹೃದ್ರೋಗ ಆಸ್ಪತ್ರೆಯ ಸ್ಥಳಾಂತರ

583: (4146)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಬನ್ನೇರುಘಟ್ಟ ರಸ್ತೆಯಲ್ಲಿರುವ ಹೊಸ ಕಟ್ಟಡಕ್ಕೆ ಯಾವಾಗ ಸ್ಥಳಾಂತರಿಸಲಾಗುವುದು;

ಆ) ಈ ಆಸ್ಪತ್ರೆಯನ್ನು ಸ್ಥಳಾಂತರಿಸಿದ ನಂತರ ಈಗಿರುವ ಆಸ್ಪತ್ರೆಯ ಜಾಗವನ್ನು ಹೃದಯಾಘಾತಕ್ಕೊಳಗಾದವರಿಗೆ ತುರ್ತು ಚಿಕಿತ್ಸೆ ನೀಡಲು ಉಪಯೋಗಿಸಿಕೊಳ್ಳಲು ಸರ್ಕಾರ ಆಲೋಚಿಸಿದೆಯೇ?

ಡಾ ।। ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) 1999ನೇ ಸಾಲಿನ ಏಪ್ರಿಲ್ ತಿಂಗಳಲ್ಲಿ ಸ್ಥಳಾಂತರಿಸಲು ತಾತ್ಕಾಲಿಕವಾಗಿ ಉದ್ದೇಶಿಸಲಾಗಿದೆ.

ಆ) ಈ ಪ್ರಸ್ತಾವನೆಯನ್ನು ಆಸ್ಪತ್ರೆಯ ಆಡಳಿತ ಮಂಡಳಿಯ ಮುಂದೆ ತೀರ್ಮಾನಕ್ಕೆ ಇಡಲಾಗಿದೆ.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೇ, ಜಯದೇವ ಹೃದ್ರೋಗ ಆಸ್ಪತ್ರೆ ನನ್ನ ಕ್ಷೇತ್ರವಾದ ಜಯನಗರದಲ್ಲಿ ಬರುತ್ತಿದೆ. ಈ ಆಸ್ಪತ್ರೆ ಪ್ರಾರಂಭವಾಗಿ ಈಗಾಗಲೇ ಸುಮಾರು 5 ವರ್ಷಗಳು ಆಗಿದೆ. ಅದು ಮೂರು ವರ್ಷಗಳಲ್ಲಿ ಮುಗಿಯಬೇಕಾದಂತಹ ಕಟ್ಟಡ. ಇನ್ನೂ ಮುಗಿದಿಲ್ಲ. ಮತ್ತು ಬಜೆಟ್‌ನಲ್ಲಿ ಹಣ ಕೊಡುತ್ತೇವೆಂದು ಹೇಳಿದ್ದರು. ಹಣ ಕೂಡ ಬಿಡುಗಡೆಯಾಗಿಲ್ಲ. ಈಗ ತಮಗೆ ಗೊತ್ತಿದೆ. ಹೃದಯಕ್ಕೆ ಸಂಬಂದಪಟ್ಟಂತೆ ಖಾಯಿಲೆಗಳು ಜಾಸ್ತಿಯಾಗುತ್ತಿವೆ. ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ 30-40 ಸಾವಿರ ರೂಪಾಯಿಗಳಿಗೆಲ್ಲಾ ಆಪರೇಷನ್ ಆಗುತ್ತದೆ. ಅದೇ ಬೇರೆ ಬೇರೆ ಆಸ್ಪತ್ರೆಗಳಿಗೆ ರೋಗಿಗಳು ಹೋದರೆ ಒಂದೂವರೆ ಲಕ್ಷ ರೂಪಾಯಿಗಳಿಗಿಂತ ಕಡಿಮೆ ಆಗುವುದಿಲ್ಲ. ಸಾಧ್ಯವಾದಷ್ಟು ಬೇಗ ಆ ಆಸ್ಪತ್ರೆಯನ್ನು ಪ್ರಾರಂಭ ಮಾಡಬೇಕು. ಈ ಆಸ್ಪತ್ರೆಗೆ ಹಣಕಾಸು ಸರಿಯಾಗಿ ಬಿಡುಗಡೆಯಾಗುತ್ತಿಲ್ಲ. ಇದೇ ಒಂದು ಪರಿಸ್ಥಿತಿ ಮುಂದುವರಿದರೆ ಆ ಆಸ್ಪತ್ರೆ ಇನ್ನೂ ಎರಡು ಮೂರು ವರ್ಷಗಳಾದರೂ ಆ ಆಸ್ಪತ್ರೆ ಅಲ್ಲಿ ಪ್ರಾರಂಭವಾಗುವ ಲಕ್ಷಣಗಳು ಕಾಣುತ್ತಿಲ್ಲ. ಮತ್ತು ಈಗ ಇರತಕ್ಕಂಥ ಆಸ್ಪತ್ರೆ ಅದು ಶಿಫ್ಟ್ ಆದ ಮೇಲೆ ಅದನ್ನು ಹಾಗೆಯೇ ಇಟ್ಟುಕೊಳ್ಳಬೇಕು. ಈಗ ಹೊಸದಾಗಿ ಕಟ್ಟುತ್ತಿರುವ ಆಸ್ಪತ್ರೆ ಬಹಳ ಇಂಟೀರಿಯರ್ ಆಗಿದೆ. ಅದನ್ನು ಹಾಗೆಯೇ ಇಟ್ಟುಕೊಂಡರೆ ಈ ಕಡೆ ಇರುವಂತಹ ರೋಗಿಗಳಿಗೆ ಅನುಕೂಲವಾಗುತ್ತದೆ.

ಡಾ: ಎಂ.ಶಂಕರನಾಯಕ್ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, 1999ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಬೇಕೆನ್ನುವ ಉದ್ದೇಶ ನಮಗೆ ಇದೆ. ಆದರೆ ಖರ್ಚಿಗಾಗಿ ಸುಮಾರು 41 ಕೋಟಿ ರೂಪಾಯಿಗಳು ನಿಗದಿಯಾಗಿರತಕ್ಕಂಥ ಹಣ. ಅದರಲ್ಲಿ 25 ಕೋಟಿ ರೂಪಾಯಿ ಹಣ ಈಗಾಗಲೇ ಬಿಡುಗಡೆಯಾಗಿದೆ. ಹಿಂದಿನ ಗೌರ್ನಿಂಗ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಪ್ರತಿ ತಿಂಗಳು ಹೆಚ್ಚುವರಿ ಎರಡು ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿ ಅದನ್ನು ಏಪ್ರಿಲ್ ತಿಂಗಳಷ್ಟರಲ್ಲಿ ಮುಗಿಸಬೇಕೆನ್ನುವ ತೀರ್ಮಾನ ಆಗಿದೆ. 16 ಕೋಟಿರೂಪಾಯಿಗಳಲ್ಲಿ ಈಗಾಗಲೇ 6 ಕೋಟಿ ರೂಪಾಯಿಗಳು ಬಿಡುಗಡೆ ಆಗಿದೆ. ಇನ್ನು 10 ಕೋಟಿ ಸರ್ಕಾರದಿಂದ ಹಣ ಬಿಡುಗಡೆಯಾಗಬೇಕಾಗಿದೆ. ಈಗ ಇರತಕ್ಕಂತ ಕಟ್ಟಡವನ್ನು ತುರ್ತು ಹೃದಯ ಅಪಘಾತಕ್ಕಾಗಿ ಅಲ್ಲಿಯೇ ಮುಂದುವರಿಸಬೇಕೇ ಅಥವಾ ಬೇರೆ ಉದ್ದೇಶಕ್ಕೆ

ಏನಾದರೂ ಬಳಸಬೇಕೇ ಎನ್ನುವ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಕಾರಣ ಅಲ್ಲಿ ಸುಟ್ಟ ಗಾಯಗಳಿಗೆ ಇರತಕ್ಕಂಥ ಜಾಗ ಬಹಳಷ್ಟು ಕಡಿಮೆ ಇದೆ, ಅದಕ್ಕೆ ಡಿಮ್ಯಾಂಡ್ ಜಾಸ್ತಿ ಇದೆ. ಅದಕ್ಕೆ ಇಷ್ಟು ದೊಡ್ಡ ಕಟ್ಟಡ ತುರ್ತು ಹೃದಯ ಅಪಘಾತಕ್ಕೆ ಬೇಕಾ ಅಥವಾ ಬೇರೆ ಏನಾದರೂ ಮಾಡಬೇಕೇ ಎನ್ನುವ ತೀರ್ಮಾನ ಇನ್ನೂ ತೆಗೆದುಕೊಂಡಿಲ್ಲ. ಮುಂದಿನ ಗೌರ್ನಿಂಗ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯ ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳು ಆಗಿದ್ದಾರೆ. ಮುಂದಿನ ಮೀಟಿಂಗ್‌ನಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ನಾವು ಎಲ್ಲಾ ಶಾಸಕರುಗಳೂ ಕೂಡ ಸಹಿ ಮಾಡಿ ಜಯದೇವ ಹೃದ್ರೋಗ ಆಸ್ಪತ್ರೆಗೆ ಸಂಬಂಧಪಟ್ಟ ಹಾಗೆ ಹೆಚ್ಚು ನೆರವನ್ನು ಸರಕಾರದವರು ಕೊಡಬೇಕೆಂದು ಕೇಳಿಕೊಂಡಿದ್ದೆವು. ಆದರೆ ಸರಕಾರದವರು ಕೊಡಲಿಲ್ಲ. ಅದರ ಜೊತೆಗೆ ಹುಡ್ಕೊದವರಿಂದ 32ಕೋಟಿ ರೂಪಾಯಿಗಳು ಇದಕ್ಕಾಗಿ ಸ್ಯಾಂಕ್ಷನ್ ಆಗಿದೆ. ಇದು ಸಾಲ ರೂಪದ ಹಣವಾಗಿದೆ. ಆದರೆ ಮಾನ್ಯ ಮುಖ್ಯಮಂತ್ರಿಯವರು ಅಧ್ಯಕ್ಷರಾಗಿದ್ದರೂ ಕೂಡ ಸರಕಾರದ ವತಿಯಿಂದ ಮೂರು ತಿಂಗಳುಗಳಿಂದ ಒಂದು ಜಿ.ಓ. ಆಗಿಲ್ಲ. ಸಾಲವನ್ನು ಪಡೆಯಲು ಸರಕಾರ ಮತ್ತು ಹುಡ್ಕೊದವರ ಮಧ್ಯೆ ಒಂದು ಅಗ್ರಿಮೆಂಟ್ ಆಗಬೇಕಾಗಿದ್ದು ಅದು ಇನ್ನೂ ಆಗಿಲ್ಲ. ಹೀಗಾಗಿ ಕಳೆದ ಮೂರು ತಿಂಗಳುಗಳಿಂದ ಅಗ್ರಿಮೆಂಟ್ ಆಗಿರದ ಕಾರಣ 32 ಕೋಟಿ ರೂಪಾಯಿಗಳು ರಿಲೀಸ್ ಆಗದೇನೇ ಉಳಿದುಕೊಂಡಿರುತ್ತದೆ. ಈಗಾಗಲೇ ಅರ್ಧದಷ್ಟು ಕಟ್ಟಿರುವ ಕಟ್ಟಡದ ಕೆಲಸವನ್ನು ಏಪ್ರಿಲ್ ತಿಂಗಳೊಳಗಾಗಿ ಮುಗಿಸಲು ಹೇಗೆ ಸಾಧ್ಯ ಎಂಬ ಬಗ್ಗೆ ಆಶ್ಚರ್ಯವಾಗುತ್ತಿದೆ. ಆದ್ದರಿಂದ ಅಗ್ರಿಮೆಂಟ್ ಮಾಡಿಕೊಳ್ಳಲು ಇರುವ ಸಮಸ್ಯೆಗಳೇನು ಮತ್ತು ಅದನ್ನು ಯಾವಾಗ ಮಾಡಿಕೊಳ್ಳುತ್ತೀರಿ? ಎಂಬ ವಿಚಾರವನ್ನು ತಿಳಿಸಬೇಕೆಂದು ಕೇಳುತ್ತೇನೆ.

ಡಾ: ಎಂ.ಶಂಕರನಾಯಕ್: ಮಾನ್ಯ ಅಧ್ಯಕ್ಷರೇ, ಆ ಕಟ್ಟಡಕ್ಕೆ ಬೇಕಾಗುವ ಹಣಕಾಸನ್ನು ಒದಗಿಸಿಕೊಡಲು ನಾವು ಈಗಾಗಲೇ ಸೂಕ್ತ ಕ್ರಮವನ್ನು ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳುವ ಹುಡ್ಕೋ ಸಾಲವು ಉಪಕರಣಗಳಿಗೆ ಮಾತ್ರ ಇರುತ್ತದೆ. ಸರಕಾರದ ಉದ್ದೇಶದಂತೆ ಅದು ಸ್ಥಳಾಂತರವಾಗಬೇಕಾಗಿದೆ ಆಗ ನಮಗೆ ಉಪಕರಣಗಳು ಬೇಕಾಗುತ್ತದೆ. ಉಪಕರಣಗಳಿಗೋಸ್ಕರವಾಗಿ ನಾವು 32 ಕೋಟಿ ರೂಪಾಯಿಗಳಷ್ಟು ಹಣವನ್ನು ಹುಡ್ಕೋದಿಂದ ಕೇಳಿದ್ದೇವೆ. ಈಗ ಕಟ್ಟಡಕ್ಕೆ ಬೇಕಾಗುವ ಹಣವನ್ನು ಸರಕಾರ ಒದಗಿಸುತ್ತದೆ. ಸೆಕೆಂಡ್‌ಸ್ಟೇಜ್‌ನಲ್ಲಿ ನಮಗೆ ಉಪಕರಣ ಮತ್ತಿತರ ಉದ್ದೇಶಿತ ಕೆಲಸಕ್ಕಾಗಿ ಹಣ ಬೇಕಾಗಿರುವುದರಿಂದ ಹುಡ್ಕೋದವರಿಂದ ಸಾಲದ ಹಣವನ್ನು ಕೇಳಿದ್ದೇವೆ. ಆ ಬಗ್ಗೆ ನಿಯಮಗಳನ್ನು ಸರಕಾರವು ಅನುಸರಿಸುತ್ತದೆ.

ಶ್ರೀ ಎ.ರಾಮದಾಸ್: ಸರಕಾರದಿಂದ ಮೂರು ತಿಂಗಳಾದರೂ ಹುಡ್ಕೋದವರೊಂದಿಗೆ ಅಗ್ರಿಮೆಂಟ್ ಮಾಡಿಕೊಂಡಿಲ್ಲವಲ್ಲಾ? ಹೀಗೆ ಜಿ.ಒ. ಹೊರಡಿಸಲು ನಿಮಗೆ ಏನಾದರೂ ಸಮಸ್ಯೆ ಇದೆಯೇ ಎಂಬುದನ್ನು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು: ಮಾನ್ಯ ಸಚಿವರು ಬಿಲ್ಡಿಂಗ್‌ಗೆ ಸರಕಾರದವರು ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಉಪಕರಣಕ್ಕಾಗಿ ಬೇಕಾಗುವ ಹಣವನ್ನು ಹುಡ್ಕೋದಿಂದ ಪಡೆದುಕೊಳ್ಳುವ ಬಗ್ಗೆ ಮುಂದಿನ ಮೀಟಿಂಗನಲ್ಲಿ ನಿರ್ಧಾರ ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೇ, ಹುಡ್ಕೋದಿಂದ 32 ಕೋಟಿ ರೂಪಾಯಿಗಳು ಸಾಂಕ್ಷನ್ ಆಗಿ ಬಂದಿದೆ. ಆದರೆ ಅಗ್ರಿಮೆಂಟ್‌ನ್ನು ಸರಕಾರದವರು ಮಾಡಿಕೊಳ್ಳದ ಕಾರಣ ಆ ಸಾಲದ ಹಣವು ರಿಲೀಸ್ ಆಗಿಲ್ಲ. ಜಿ.ಒ. ಹೊರಡಿಸಲು ಏನು ಸಮಸ್ಯೆ ಇದೆ ಮತ್ತು ಅದನ್ನು ಯಾವಾಗ ಹೊರಡಿಸುತ್ತೀರಿ? ಎಂದು ಕೇಳುತ್ತಿದ್ದೇನೆ.

ಶ್ರೀ ರಾಮಲಿಂಗರೆಡ್ಡಿ: ಮಾನ್ಯ ಅಧ್ಯಕ್ಷರೇ, ಬಳ್ಳಾರಿಯ ಲೋಕಸಭಾ ಸದಸ್ಯರಾದ ಕೆ.ಸಿ.ಕೊಂಡಯ್ಯನವರು ಪಾರ್ಲಿಮೆಂಟ್‌ನಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದರು. ಜಯದೇವ ಆಸ್ಪತ್ರೆಗೆ ರಾಜ್ಯ ಸರಕಾದವರು ಕೇಂದ್ರದ ಅನುದಾನವನ್ನು ಕೇಳಿದ್ದಾರೆಯೇ ಎಂಬುದು ಅವರ ಪ್ರಶ್ನೆಯಾಗಿತ್ತು. ರಾಜ್ಯ ಸರಕಾರದಿಂದ ಆ ಬಗ್ಗೆ ಯಾವುದೇ ಪ್ರಸ್ತಾವನೆ ಬಂದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಕೇಂದ್ರಕ್ಕೆ ಆ ಕುರಿತು ಪ್ರಸ್ತಾವನೆಯನ್ನು ಕಳುಹಿಸಿ ಎಂದು ಕೇಳಿಕೊಳ್ಳುತ್ತೇನೆ.

ಡಾ: ಎಂ.ಶಂಕರನಾಯಕ್: ಮಾನ್ಯ ಅಧ್ಯಕ್ಷರೇ, ನಮಗೆ ಉಪಕರಣಗಳು ಕಟ್ಟಡವು ಪೂರ್ಣಗೊಂಡನಂತರ ಬೇಕಾಗುತ್ತದೆ. ಏಪ್ರಿಲ್ ತಿಂಗಳಲ್ಲಿ ಕಟ್ಟಡವು ಪೂರ್ಣಗೊಂಡ ನಂತರ ಬೇಕಾಗುವ ಉಪಕರಣಗಳನ್ನು ಈಗಲೇ ತೆಗೆದಿಟ್ಟುಕೊಳ್ಳುವ ಅವಶ್ಯಕತೆ ಇಲ್ಲದಿರುವುದರಿಂದ ಹುಡ್ಕೋ ಸಾಲದ ಬಗ್ಗೆ ಅಗ್ರಿಮೆಂಟ್‌ನ್ನು ಈ ತಿಂಗಳು ಅಥವಾ ಬರುವ ತಿಂಗಳಲ್ಲಿ ಮಾಡಿಕೊಳ್ಳುತ್ತೇವೆ. ಉಪಕರಣ ಹಾಗೂ ಸೆಕೆಂಡ್‌ಸ್ಟೇಜ್‌ನಲ್ಲಿ ಬೇಕಾಗುವ ಇನ್ನಷ್ಟು ಹಣವನ್ನು ಹೊಂದಿಸಿ ಕೆಲಸವನ್ನು ಪ್ರಾರಂಭ ಮಾಡುತ್ತಿದ್ದೇವೆ. ಮಾನ್ಯ ರಾಮಲಿಂಗ ರೆಡ್ಡಿಯವರು ಕೇಳಿದ ಪ್ರಶ್ನೆಗೆ ನನ್ನ ಹತ್ತಿರ ಉತ್ತರವಿಲ್ಲ. ಅದನ್ನು ಒದಗಿಸಿಕೊಡುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೇ, ಹೃದ್ರೋಗ ಆಸ್ಪತ್ರೆಯ ಬಗ್ಗೆ ಒಂದು ವಿಷಯವನ್ನು ಕೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಹೃದಯ ರೋಗ ಆಸ್ಪತ್ರೆಯ ಅಧ್ಯಕ್ಷರಾಗಿದ್ದಾರೆ. ಹೃದಯರೋಗ ಚಿಕಿತ್ಸೆ ಬಗ್ಗೆ ಉತ್ತರ ಕರ್ನಾಟಕ ಮತ್ತಿತರ ಭಾಗಗಳಿಂದ 400-500 ಕಿ.ಮೀ.ದೂರದಿಂದ ಜನರು ಬರಬೇಕಾಗಿರುತ್ತದೆ.

ಮೈಸೂರು ಮತ್ತು ಉತ್ತರ ಕರ್ನಾಟಕ ಭಾಗಗಳಲ್ಲಿ ಸೇರಿ ಮೂರು ಡಯಾಗ್ನಸ್ಟಿಕ್ ಸೆಂಟರ್‌ಗಳನ್ನು ಪ್ರಾರಂಭ ಮಾಡಿದರೆ ಆ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಹಾಗೆ ಮಾಡಿದಲ್ಲಿ ಆಪರೇಷನ್ ಮಾಡಿಸಿಕೊಳ್ಳಬೇಕಾದವರು ಮಾತ್ರ ಬೆಂಗಳೂರಿಗೆ ಬರುವಂತೆ ಆಗುತ್ತದೆ. ಅವರು ಕೇವಲ ಡಯಾಗ್ನೆಸ್‌ಗಾಗಿ ಮಾತ್ರ 500-600 ಕಿ.ಮೀ. ದೂರದಿಂದ ಬಂದು ಹೋಗುವುದು ಕಷ್ಟಕರವಾದ ಕೆಲಸವಾಗಿದೆ. ಈ ಕಷ್ಟವನ್ನು ತಪ್ಪಿಸಲು ಡಯಾಗ್ನೆಸ್ ಸೆಂಟರ್‌ಗಳನ್ನು ಅಲ್ಲಲ್ಲಿ ಮಾಡಿದರೆ ತುಂಬಾ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, ಕರ್ನಾಟಕ ಹೆಲ್ತ್‌ಸಿಸ್ಟಂ ಡೆವಲಪ್‌ಮೆಂಟ್‌ನಲ್ಲಿ ಮಾಡತಕ್ಕಂಥ ಉದ್ದೇಶವು ಅನವಶ್ಯಕವಾಗಿ ಜಿಲ್ಲಾ ಮತ್ತು ರಾಜ್ಯಮಟ್ಟದ ಆಸ್ಪತ್ರೆಗಳ ಮೇಲೆ ಬೀಳತಕ್ಕಂಥ ಒತ್ತಡವನ್ನು ಕಡಿಮೆಗೊಳಿಸಿ ಪ್ರಾಥಮಿಕ ಆರೋಗ್ಯದ ಸಂರಕ್ಷಣೆಗಾಗಿ ಸೆಕೆಂಡರಿ ಲೆವೆಲ್ ಹಾಸ್ಪಿಟಲ್ ಮತ್ತು ಟೆರೆಷಿಯರಿ ಲೆವೆಲ್ ಹಾಸ್ಪಿಟಲ್‌ಗಳನ್ನು ವ್ಯವಸ್ಥೆಗೊಳಿಸುವ ದಿಸೆಯಲ್ಲಿ ಉತ್ತರ ಕರ್ನಾಟಕದ ಭಾಗದಲ್ಲಿ ರಾಯಚೂರಲ್ಲಿ ಸುಮಾರು 350 ಹಾಸಿಗೆಗಳ ಆಸ್ಪತ್ರೆಯನ್ನು ಓವೆಕ್ ಯೋಜನೆಯಡಿಯಲ್ಲಿ ಸುಮಾರು 29.5 ಕೋಟಿ ರೂಪಾಯಿ ವೆಚ್ಚದಲ್ಲಿ ಕಾರ್ಯಾರಂಭವಾಗಿದ್ದು ಡಿಸೆಂಬರ್ ಅಥವಾ ಜನವರಿಯಲ್ಲಿ ಅದರ ಉದ್ಘಾಟನೆ ಆಗುತ್ತದೆ. ಅದು ಉತ್ತರ ಕರ್ನಾಟಕ ಭಾಗದ ಜನರಿಗೆ ಉತ್ತಮವಾದಂಥ ಟೆರೆಸಿಯಲ್ ಲೆವೆಲ್ ಹಾಸ್ಪಿಟಲ್ ಆಗುತ್ತದೆ. ಅದೇ ರೀತಿಯಲ್ಲಿ ಮೈಸೂರು ಮತ್ತು ಇನ್ನೊಂದು ವಿಭಾಗದಲ್ಲಿ ತೆರೆಯ ತಕ್ಕಂಥ ಉದ್ದೇಶವು ಸರಕಾರದಲ್ಲಿರುವುದರಿಂದ ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ವಿಶ್ವಬ್ಯಾಂಕ್ ನೆರವಿನ ಯೋಜನೆಯೊಳಗಡೆ ಸೇರಿಸುವುದರ ಜೊತೆಗೆ ಇದನ್ನು ಕೂಡ ಪರಿಶೀಲನೆ ಮಾಡುತ್ತೇವೆ.

ಉಪಾಧ್ಯಕ್ಷರು: ಇದನ್ನು ತಾವುಗಳು ಉತ್ತರ ಕರ್ನಾಟಕ ವಿಭಾಗದಲ್ಲಿ ಮಾಡುವುದಾದರೆ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಮಾಡುವುದು ಉತ್ತಮ.

ಶ್ರೀ ಚಂದ್ರಕಾಂತ್ ಬೆಲ್ಲದ್: ಕಿಮ್ಸ್‌ನಲ್ಲಿ ಮಾಡಿದರೆ ಆ ವಿಭಾಗದ ಎಲ್ಲಾ ಜಿಲ್ಲೆಗಳಿಗೂ ಉತ್ತಮ ಆರೋಗ್ಯ ಸೌಲಭ್ಯವನ್ನು ಒದಗಿಸಿಕೊಟ್ಟ ಹಾಗೆ ಆಗುತ್ತದೆ.

ಡಾ: ಎಂ.ಶಂಕರನಾಯಕ್: ಹೃದ್ರೋಗ ಕಾಯಿಲೆಗೆ ಡಯಾಗ್ನೆಸ್ ಮಾಡಲು ಪ್ರತ್ಯೇಕ ಸೆಂಟರ್‌ಗಳು ಬೇಕಾಗಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 16ಮೆಡಿಕಲ್ ಕಾಲೇಜ್ ಆಸ್ಪತ್ರೆಗಳು ಇದ್ದಾವೆ. ಅಲ್ಲಿರತಕ್ಕಂಥ ಡಾಕ್ಟರ್‌ಗಳು ಮತ್ತು ವ್ಯವಸ್ಥೆಗಳ ಮೂಲಕ ಯಾರಿಗೆ ಹೃದಯ ತಪಾಸಣೆ ಮಾಡಿ ಆಪರೇಷನ್‌ನ ಅವಶ್ಯಕತೆ ಇದೆಯೋ ಇಲ್ಲವೋ ಎಂಬುದನ್ನು ಪತ್ತೆ ಹಚ್ಚಿ ಹೇಳಬಹುದು. ಬೇಕಾಗುವ ಉಪಕರಣಗಳೂ ಕೂಡ ಇದ್ದು ಆ 16ಮೆಡಿಕಲ್ ಕಾಲೇಜ್ ಆಸ್ಪತ್ರೆಗಳಲ್ಲಿ ಸದರಿ ಚಿಕಿತ್ಸೆಯು ಈಗಲೂ

ಸೂಕ್ತ ರೀತಿಯಲ್ಲಿ ನಡೆಯುತ್ತಾ ಇದೆ. ಆದರೆ ಕೆಲವು ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜುಗಳು ಇಲ್ಲದೇ ಇರುವುದರಿಂದ ಅಂಥ ಜಿಲ್ಲೆಗಳಿಗೆ ಸುಸಜ್ಜಿತವಾದ ಒಂದು ಆಸ್ಪತ್ರೆ ಬರಲಿ ಎಂಬ ಉದ್ದೇಶದಿಂದ ನಾವು ಎಸೆನ್‌ಷಿಯಾಲಿಟಿ ಸರ್ಟಿಫಿಕೇಟ್‌ನ್ನು ಕೇಂದ್ರ ಸರಕಾರಕ್ಕೆ ಕೊಟ್ಟಿರುತ್ತೇವೆ. ಮಾನ್ಯ ಪುಟ್ಟಣ್ಣಯ್ಯನವರು ಆಪರೇಷನ್‌ಗೆ ಮಾತ್ರ ಬೆಂಗಳೂರಿಗೆ ಬರಲಿ, ಡಯಾಗ್ನೆಸ್ಟಿಕ್ ಸೆಂಟರ್‌ಗಳು ಅಲ್ಲಿ ಇರಲಿ ಎಂದು ಹೇಳುತ್ತಿದ್ದಾರೆ. ಆದರೆ ಡಯಾಗ್ನೆಸ್ ಮಾಡಲು ನಮ್ಮಲ್ಲಿ ಇಸಿಜಿ ಮೆಷಿನ್ ಆಗಲಿ, ಥ್ರೆಡ್‌ಮಿಲ್ ಮೆಷಿನ್ ಆಗಲೀ, ಮತ್ತಿತರ ಎಲ್ಲಾ ಸಂಬಂಧಪಟ್ಟ ವ್ಯವಸ್ಥೆಗಳು ವೈದ್ಯಕೀಯ ಆಸ್ಪತ್ರೆಗಳಲ್ಲಿ ಇದೆ.

ಶ್ರೀ ಚಂದ್ರಕಾಂತ್ ಬೆಲ್ಲದ: ಹುಬ್ಬಳ್ಳಿಯ ಕೆಎಂಸಿ ಆಸ್ಪತ್ರೆಯು ದೊಡ್ಡ ಆಸ್ಪತ್ರೆಯಾಗಿದ್ದು ಸ್ವಾಯತ್ತತೆಯನ್ನು ಕೂಡ ಕೊಟ್ಟಿದ್ದೀರಿ. ಅಲ್ಲಿ ಈ ವ್ಯವಸ್ಥೆಯು ಇದೆಯೇ?

ಡಾ: ಎಂ.ಶಂಕರನಾಯಕ್: ಅಲ್ಲಿ ಇಂಟೆನ್‌ಸೀವ್ ಕಾರ್ಡಿಯಾಕ್ ಕೇರ್ ಯೂನಿಟ್ ಎಂದು ಹೊಸದಾಗಿ ಪ್ರಾರಂಭ ಮಾಡಿದ್ದೇವೆ. ಜಯದೇವ ಆಸ್ಪತ್ರೆಯಲ್ಲಿ ಹಾರ್ಟ್‌ಅಟ್ಯಾಕ್ ಬಂದಾಗ ಏನು ಮಾಡುತ್ತಾರೆ ಅಂದರೆ, ಸುಮಾರು ಆರು ಜನ ರೋಗಿಗಳನ್ನು ಒಂದು ಕಡೆ ಇಟ್ಟು ಚಿಕಿತ್ಸೆ ಮಾಡಿ ಮಾನಿಟರ್ ಮಾಡತಕ್ಕಂಥ ಒಂದು ಘಟಕವನ್ನು ಹೊಂದಿದ್ದು ಅದನ್ನು ಹುಬ್ಬಳ್ಳಿಯಲ್ಲಿಯೂ ಕೂಡ ಪ್ರಾರಂಭ ಮಾಡಿದ್ದೇವೆ. ಬಳ್ಳಾರಿಯಲ್ಲಿಯೂ ಅದೇ ವ್ಯವಸ್ಥೆಯನ್ನು ಮಾಡಿದ್ದೇವೆ. ಆದ್ದರಿಂದ ಆ ಸ್ಥಳಗಳಲ್ಲಿ ರೋಗ ಪತ್ತೆ ಹಚ್ಚಿದ ನಂತರ ಆಪರೇಷನ್ ಮಾಡುವ ಸ್ಥಿತಿಯಲ್ಲಿದ್ದರೆ ಮಾತ್ರ ಬೆಂಗಳೂರಿಗೆ ಕಳುಹಿಸಿಕೊಡುತ್ತಾರೆ. ಉಳಿದಂತೆ ಅಲ್ಲಿಯೇ ಚಿಕಿತ್ಸೆ ನೀಡಲಾಗುತ್ತದೆ.

ಶ್ರೀ ಬಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಹೃದಯರೋಗ, ಕ್ಯಾನ್ಸರ್ ರೋಗದಿಂದ ಬಳಲುತ್ತಿರುವವರಿಗೆ ಉಪಚಾರಕ್ಕೆಂದು ನಮ್ಮ ಕ್ಷೇತ್ರಗಳ ಜನರಿಗೆ ಸಹಾಯವನ್ನು ಮಾಡುತ್ತಿದ್ದಾರೆ. ನಾವುಗಳು ಹೋಗಿ ಕೇಳಿಕೊಂಡಾಗ ರೋಗಿಗಳಿಗೆ ನಿಯಮಾನುಸಾರವಾಗಿ 5 ಸಾವಿರ, 10ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಪರಿಹಾರ ನಿಧಿಗೆ ಯಾರಾದರೂ ದಾನಿಗಳು ಕೊಡುವ ಹಣದಿಂದ ಇಟ್ಟುಕೊಂಡಿದ್ದಾರೆ. ಇದು ಬಹಳ ಒಳ್ಳೆಯ ಕೆಲಸ. ಇವೊತ್ತು ಸಣ್ಣಸಣ್ಣ ಮಕ್ಕಳು ಕೂಡ ಹೃದಯದಲ್ಲಿ ಹೋಲ್ಸ್ ಆಗಿ ಚಿಕಿತ್ಸೆಗೆ ಬರುತ್ತಿದ್ದಾರೆ. ಆದ್ದರಿಂದ ಪರಿಹಾರ ನಿಧಿಗೆ ದಾನಿಗಳ ಹಣವಲ್ಲದೆ ಬಜೆಟ್‌ನಲ್ಲಿ ಒಂದೆರಡು ಕೋಟಿ ರೂಪಾಯಿಗಳನ್ನು ಇಟ್ಟರೆ ಬಹಳಷ್ಟು ಕಡು ಬಡವರಿಗೆ ಸಹಾಯವಾಗುತ್ತದೆ. ಈ ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳಲು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಸಭಾಧ್ಯಕ್ಷರೇ, ನಮ್ಮ ಸರಕಾರ ಬಂದಮೇಲೆ,

ಕ್ಯಾನ್ಸರ್, ಹೃದ್ರೋಗ, ನರರೋಗಗಳಿಗೆ ಸಂಬಂಧಪಟ್ಟ ಹಾಗೆ ದುಬಾರಿ ವೆಚ್ಚದ ಕಾಯಿಲೆಗಳು ಬಂದಾಗ ಬಡತನದ ರೇಖೆಗಿಂತ ಕೆಳಗಡೆ ಇರತಕ್ಕಂಥ ಜನರು ಕಾಯಿಲೆಯ ವೆಚ್ಚವನ್ನು ಭರಿಸಲು ಸಾಧ್ಯವಾಗಲಾರದಂಥ ಸನ್ನಿವೇಶವನ್ನು ಮುಖ್ಯಮಂತ್ರಿಗಳ ಹೆಲ್ತ್ ಕಾರ್ಪಸ್ ಫಂಡ್‌ನ್ನು 100ಕೋಟಿ ರೂಪಾಯಿಗಳದ್ದು ಮಾಡಬೇಕೆಂದು ಹೊಸ ಯೋಜನೆಯನ್ನು ರಾಜ್ಯ ಸರಕಾರವು ಸ್ಥಾಪನೆ ಮಾಡಿದೆ. ನಮ್ಮ ಸರಕಾರದ ಈ ಯೋಜನೆಯು ರಾಷ್ಟ್ರೀಯ ಕಾರ್ಯಕ್ರಮವೂ ಕೂಡ ಆಗಿದೆ. ಇದಕ್ಕೆ ಈಗಾಗಲೇ ಸುಮಾರು 25-30ಕೋಟಿ ರೂಪಾಯಿಗಳನ್ನು ನಾವು ಕಲೆಕ್ಟ್ ಮಾಡಿ ಕಳೆದ ವರ್ಷದ ಆಯವ್ಯಯದಲ್ಲಿ ಕೂಡ ಐದರಿಂದ ಹತ್ತು ಕೋಟಿಗಳನ್ನು ಕೊಟ್ಟಿದ್ದೇವೆ. ಕೇಂದ್ರದಿಂದಲೂ ಕೂಡ ಸನ್ಮಾನ್ಯ ದೇವೇಗೌಡರು ಪ್ರಧಾನಿಯವರಾಗಿದ್ದಾಗ ಐದು ಕೋಟಿ ರೂಗಳನ್ನು ಇದಕ್ಕಾಗಿ ಕೊಟ್ಟಿದ್ದಾರೆ. ಹಾಗೆಯೇ ಮಾನ್ಯ ಸದಸ್ಯರು ಹೇಳಿದಂತೆ ಮುಂದಿನ ಬಜೆಟ್‌ನಲ್ಲಿ ಸ್ವಲ್ಪ ಹಣ ಒದಗಿಸುವ ವಿಚಾರವನ್ನು ಸರಕಾರವು ಗಮನದಲ್ಲಿಟ್ಟುಕೊಳ್ಳುತ್ತದೆ.

ಶಿಗ್ಗಾಂವ, ಸವಣೂರ, ಬಂಕಾಪುರ ಆರೋಗ್ಯ ಕೇಂದ್ರ ಮೇಲ್ದರ್ಜೆಗೇರಿಸಿ ಜರ್ಮನ್ ಸರ್ಕಾರದ ಸಹಾಯದಿಂದ ನವೀಕರಣ ಕೆಲಸ

585: (4106)

ಶ್ರೀ ಮಂಜುನಾಥ ಸಿ.ಕುನ್ನೂರ (ಶಿಗ್ಗಾಂವ): ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಶಿಗ್ಗಾಂವ ಮತ್ತು ಸವಣೂರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನವೀಕರಣ ಕಾಮಗಾರಿಯನ್ನು ಜರ್ಮನ್ ಸರ್ಕಾರದ ಸಹಾಯದಿಂದ ಯಾವಾಗ ಪ್ರಾರಂಭಿಸಲಾಯಿತು.

ಆ. ಸದರಿ ಕಾಮಗಾರಿಗಳನ್ನು ಯಾವ ಗುತ್ತಿಗೆದಾರರಿಗೆ ವಹಿಸಲಾಗಿದೆ.

ಇ. ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿ ಎಷ್ಟು? ಹಾಗೂ ಇದಕ್ಕೆ ವೆಚ್ಚ ಮಾಡಲಾಗುವ ಹಣವೆಷ್ಟು?

ಈ. ಶಿಗ್ಗಾಂವ ತಾಲ್ಲೂಕು ಬಂಕಾಪುರ ಸಮುದಾಯ ಆರೋಗ್ಯ ಕೇಂದ್ರವನ್ನು ಜರ್ಮನ್ ಸರ್ಕಾರದ ಸಹಾಯದಲ್ಲಿ ನವೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗುವುದೆ?

ಡಾ ॥ ಹೆಚ್.ಸಿ.ಮಹಾದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):